# ರಾಮಧಾನ್ಯ ಚರಿತೆ

## ಪದಗಳ ಅರ್ಥ

ಕ್ರ ತು,  ಪತಿಕರಿಸಲು, ಪಿಸುಣ, ಪ್ರತಿಷ್ಠ, ವಿರಂಚಿ, ವ್ರಿಹಿಗ, ಹದನು, ಹಿಸುಣ, ಕ್ಷಿತಿಯಮರರು, ಖತಿ, ನೆರೆದಲೆ, ನೆಲ್ಲು, ಪಕ್ಷಪಾತ

## ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. (Answer the following in one sentence)

೧. ದಾಶರಥಿ ಎಂದರೆ ಯಾರು?
೨. ನರೆದಲಗ ಯಾರನ್ನು ಆದರಿಸಿ ಸಲಹುತ್ತದೆ?
೩. ಹರಿಹರ ವಿರಂಚಿಗಳನ್ನು ಏತಕ್ಕಾಗಿ ಅಯೋಧ್ಯೆಗೆ ಕರೆಸಲಾಗುತ್ತದೆ?
೪. ಸೆರೆಗೆ ಯಾರು ಯಾರನ್ನು ಹಾಕಲಾಗುತ್ತದೆ?
೫. ದೇಶಕ್ಕೆ ಅತಿಶಯವಾದ ಧಾನ್ಯ ಯಾವುದು?
೬. ವ್ರಿಹಿ ಯಾರ ಬಾಯಿಗೆ ತುತ್ತು ಎಂದು ಹೇಳಿದೆ?

## ಆ. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. . (Answer the following in three - four sentences)

೧. ಶ್ರೇಷ್ಠವೆಂದು ಹೇಳಲಾಗಿರುವ ಧಾನ್ಯಗಳಾವುವು?

೨. ಗೌತಮರು ನರೆದಲಗನೆ ಶ್ರೇಷ್ಠವೆನ್ನಲು ವ್ರಿಹಿಯು ಹೇಳಿದ್ದೇನು?
೩. ನರೆದಲಗವು ವ್ರಿಹಿಯನ್ನು ಏನೆಂದು ಹೀಯಾಳಿಸಿತು?
೪. ವ್ರಿಹಿಯನ್ನು ಯಾವ ಯಾವ ಮಂಗಳ ಕಾರ್ಯಗಳಲ್ಲಿ ಬಳಸಲಾಗುತ್ತದೆ?
೫. ಶ್ರೀರಾಮನು ಧಾನ್ಯಗಳ ವಿಚಾರದಲ್ಲಿ ಕೈಗೊಂಡ ತೀರ್ಮಾನವೇನು?

## ಇ. ಕೆಳಗಿನ ಪ್ರಶ್ನೆಗಳಿಗೆ ಏಳು-ಎಂಟು ವಾಕ್ಯಗಳಲ್ಲಿ ಉತ್ತರಿಸಿ. (Answer the following in eight - ten sentences)

೧. ಶ್ರೀರಾಮನು ನರೆದಲೆಗ ಹಾಗೂ ವ್ರಿಹಿಯನ್ನು ಸೆರೆಮನೆಗೆ ಹಾಕಲು ಕಾರಣವೇನು?

೨. ನರೆದಲಗ ಹಾಗೂ ವ್ರಿಹಿಗಳ ನಡುವೆ ನಡೆದ ಸಂವಾದವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

ಈ. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ. (Write the context in details)

೧. "ನಮ್ಮಯ ದೇಶಕತಿಶಯ ನರೆದಲಗ"

೨. "ಇವರಿರಲಿ ಸೆರೆಯೊಳಗಾರು ತಿಂಗಳು"

೩. "ವಿಲಯಕಾಲದೊಳನ್ನವಿಲ್ಲದೆ ಅಳಿವ ಪ್ರಾಣಿಗಳಾಧರಿಸಿ ಸಲಹುವೆ"

೪. "ಕುಲಹೀನ ನೀನು ಪ್ರತಿಷ್ಠ ಸುಡು ಮತಿಹೀನ ನೀನು"

ಉ. ಮೊದಲೆರೆಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.

೧. ಪುರಂದರದಾಸರು : ಪುರಂದರವಿಠಲ : : ಕನಕದಾಸರು :

೨. ವ್ರಿಹಿ : ಭತ್ತ : : ನರೆದಲಗ :

೩. ಬಾಣಂತಿಯರಿಗೆ : ಪಥ್ಯ : : ಹೆಣದ ಬಾಯಿಗೆ :

೪. ಕ್ಷಿತಿ : ಭೂಮಿ : : ವಿರಂಚಿ :

೫. ಸೆರೆಯೊಳಗೆ : ಆಗಮಸಂಧಿ : : ತಾನೆಲ್ಲಿ :

ಊ. ಗುಂಪಿಗೆ ಸೇರದ ಪದಗಳನ್ನು ಆಯ್ದು ಬರೆಯಿರಿ.

೧. ಹರಿಭಕ್ತಸಾರ ರಾಮಧಾನ್ಯಚರಿತ್ರೆ ರಾಮಾಶ್ವಮೇಧಂ ನಳಚರಿತ್ರೆ

೨. ಕನಕದಾಸರು ಪುರಂದರದಾಸರು ವ್ಯಾಸರಾಯರು ಬಸವಣ್ಣ.

೩. ವ್ರಿಹಿ ಗೋಧಿ ನೆಲ್ಲು ಭತ್ತ

೪. ಗುಣಸಂಧಿ ಲೋಪಸಂಧಿ ಆಗಮಸಂಧಿ ಆದೇಶಸಂಧಿ.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

## ಅಭ್ಯಾಸ ಚಟುವಟಿಕೆ

### ಅ. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ಮಾತ್ರೆ ಎಂದರೇನು? ಉದಾಹರಣೆ ಸಹಿತ ವಿವರಿಸಿ.

೨. ಮಾತ್ರಾಗಣ ಎಂದರೇನು? ಅದರ ವಿಧಗಳಾವುವು? – ತಿಳಿಸಿ

೩. ಕಂದಪದ್ಯದ ಲಕ್ಷಣಗಳೇನು?

೪. ಷಟ್ಪದಿ ಎಂದರೇನು? ಭಾಮಿನಿ ಷಟ್ಪದಿಯ ಲಕ್ಷಣಗಳೇನು?

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ